■ ರಘು

# ಮತ್ತೆ ಕನ್ನಡದ ಧೂಳು!



ಐಂದ್ರಿತಾ ರೇ ನಾಯಕಿಯಾಗಿರುವ ಕನ್ನಡ ಚಿತ್ರ 'ಧೂಳ್' ತೆರೆ ಕಂಡಿದೆ. ಈ ಮೂಲಕ ಬಹುದಿನಗಳ ನಂತರ ತಮ್ಮ ನಟನೆಯ ಚಿತ್ರವೊಂದು ತೆರೆಕಂಡ ಖುಷಿಯನ್ನು ಐಂದ್ರಿತಾ ಸವಿಯುವಂತಿಲ್ಲ. ಪಾಪ, ಆಕೆ ನಕುಲ್‌ಗೆ ಜೋಡಿಯಾಗಿ ನಟಿಸಬೇಕಿದ್ದ ಜಾನ್ ಮಹೇಂದ್ರನ್ ನಿರ್ದೇಶನದ ತಮಿಳು ಚಿತ್ರದ ಅವಕಾಶ ಕೈತಪ್ಪಿಹೋಗಿದೆ. ಫೋಟೊಶೂಟ್ ಮುಗಿದು, ಇನ್ನೇನು ಚಿತ್ರೀಕರಣ ಆರಂಭವಾಗಬೇಕು ಎನ್ನುವಷ್ಟರಲ್ಲಿ ಚಿತ್ರತಂಡಕ್ಕೆ ಹುಡುಗಿ ಇಷ್ಟವಾಗಿಲ್ಲ ಎನ್ನುವ ವರ್ತಮಾನ ಬಂದಿದೆ.

ತಮಿಳು ಚಿತ್ರದಿಂದ ಹೊರಬರಲು ಐಂದ್ರಿತಾ ಹೇಳುವ ಕಾರಣವೇ ಬೇರೆ. "ಸುಖಾಸುಮ್ಮನೆ ಚಿತ್ರದ ಶೂಟಿಂಗ್ ತಡ ಮಾಡಿದ್ದಾರೆ. ಎರಡು ತಿಂಗಳು ಕಾದದ್ದು ವ್ಯರ್ಥವಾಯಿತು. ನಾನಿಲ್ಲಿ 'ಪರಮಾತ್ಮ' ಚಿತ್ರ ಒಪ್ಪಿಕೊಂಡಿರುವುದರಿಂದ ತಮಿಳು ಚಿತ್ರ ಕೈಬಿಡಬೇಕಾಯಿತು. ಜಾನ್ ಅವರದ್ದು ವೃತ್ತಿಪರ ಅಲ್ಲದ ನಡವಳಿಕೆ" ಎನ್ನುವುದು ಅವರ ಸ್ಪಷ್ಟನೆ ಹಾಗೂ ಆರೋಪ. ಅಂದ ಹಾಗೆ, ಐಂದ್ರಿತಾ ನಟನೆಯ ಚೊಚ್ಚಿಲ ತೆಲುಗು ಚಿತ್ರದ ಬಿಡುಗಡೆಗೆ ಕೂಡ ಮುಹೂರ್ತ ಇನ್ನೂ ಕೂಡಿಬಂದಿಲ್ಲ. ಹಾಗಾಗಿ, ಮತ್ತೆ ಕನ್ನಡದ 'ಧೂಳ್'ನಿಂದಲೇ ಎದ್ದು ಬರುವ ಅನಿವಾರ್ಯತೆ ಈ ಹುಡುಗಿಯದು.

# 'ಹೋರಿ' ಬಂತೋರೀ...

'ನಟಿಸುವುದು ಅನಿವಾರ್ಯ ಕರ್ಮ ನನಗೆ' ಎನ್ನುವಂತೆ ನಮರಿಹುಲಿ 'ಹೋರಿ' ರೂಪದಲ್ಲಿ ಗುಟುಕು ಹಾಕುತ್ತಿದೆ. ಅರ್ಥಾತ್, ಟೈಗರ್ ಪ್ರಭಾಕರ್ ಅವರ ಪುತ್ರ ವಿನೋದ್ ನಟನೆಯ 'ಹೋರಿ' ಚಿತ್ರ ತೆರೆಕಂಡಿದೆ. ಲಿಂಗೇಗೌಡ ಎನ್ನುವ ಪ್ರಭಾಕರ್ ಅಭಿಮಾನಿಯೊಬ್ಬರು, ತಮ್ಮ 'ಟೈಗರ್ ಗುರು' ಅಭಿಮಾನದ ಕಾರಣದಿಂದಾಗಿ ಈ ಚಿತ್ರ ನಿರ್ಮಿಸಿದ್ದಾರೆ. ಒಂದರ್ಥದಲ್ಲಿ, 'ಹೋರಿ' ಗುರುಕಾಣಿಕೆ!



'ಹೋರಿ' ನನ್ನ ಲೈಫ್ ಟೈಮ್ ಚಿತ್ರ ಎಂದಿರುವ ವಿನೋದ್ ಪ್ರಭಾಕರ್, ಚಿತ್ರದಲ್ಲಿ ಮೈನವಿರೇಳಿಸುವ ಸಾಹಸ ದೃಶ್ಯಗಳಲ್ಲಿ ಪಾಲ್ಗೊಂಡಿದ್ದಾರಂತೆ. ಗೌರಿ ಮುಂಜಾಲ್ ಹಾಗೂ ರಮಣಿತೊ ಚೌಧುರಿ ಚಿತ್ರದ ನಾಯಕಿಯರು. ಚಿತ್ರದ ನಿರ್ದೇಶಕ ನಾಗೇಂದ್ರ ಮಾಗಡಿ ಸಕಲ ಮಸಾಲೆಗಳನ್ನೂ ಸಿನಿಮಾದಲ್ಲಿ ಕಲೆಹಾಕಿದ್ದಾರಂತೆ. 'ಹೋರಿ'ಯೇನೊ ಗುಟುರು ಹಾಕುತ್ತಿದೆ. ಪ್ರೇಕ್ಷಕರು ಆಖಾಡದತ್ತ ಮುಗಿಬಿದ್ದಿರುವ ಸುದ್ದಿ ಮಾತ್ರ ಈವರೆಗೆ ಬಂದಿಲ್ಲ.

# 'ಗಾಡ್‌ಫಾದರ್' ಉಪೇಂದ್ರ



ಉಪೇಂದ್ರ ತಮ್ಮ ನಟನೆ – ನಿರ್ದೇಶನದ 'ಸೂಪರ್' ಚಿತ್ರವನ್ನು ಹಟ ತೊಟ್ಟು ಗೆಲ್ಲಿಸಿಯಾಯಿತು. ಆ ದಣಿವಿನಿಂದ ಹೊರಬರಲು ಅವರೀಗ ರೀಮೇಕ್ ಚಿತ್ರದಲ್ಲಿ ತೊಡಗಿಕೊಂಡಿದ್ದಾರೆ. 'ಗಾಡ್‌ಫಾದರ್' ಎನ್ನುವ ಈ ಚಿತ್ರದಲ್ಲಿ ಉಪೇಂದ್ರ ಅವರ ಪಾತ್ರ ಅಭಿನಯಕ್ಕೆ ಮಾತ್ರ ಸೀಮಿತ. ಶ್ರೀರಾಮ್ ಚಿತ್ರದ ನಿರ್ದೇಶಕರು. ತಮಿಳಿನಲ್ಲಿ ಛಾಯಾಗ್ರಾಹಕರಾಗಿ ಹೆಸರು ಮಾಡಿರುವ ಶ್ರೀರಾಮ್, 'ಗಾಡ್‌ಫಾದರ್' ಮೂಲಕ ಕನ್ನಡದಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

'ಗಾಡ್‌ಫಾದರ್' ತಮಿಳಿನ 'ವರಲಾರು' ಚಿತ್ರದ ಕನ್ನಡ ಅವತರಣಿಕೆ. ತಮಿಳಿನಲ್ಲಿ ಕೆ.ಎಸ್ .ರವಿಕುಮಾರ್ ನಿರ್ದೇಶಿಸಿ ಅಜಿತ್, ಅಸಿನ್ ನಟಿಸಿದ್ದ 'ವರಲಾರು' ಸೂಪರ್‌ಹಿಟ್ ಚಿತ್ರ. ಕನ್ನಡದಲ್ಲಿ 'ಗಾಡ್‌ಫಾದರ್' ನಿರ್ಮಿಸುತ್ತಿರುವ ನಿರ್ಮಾಪಕ ಕೆ.ಮಂಜು ಅವರೂ ದೊಡ್ಡ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಇದಕ್ಕೆ ತಕ್ಕಂತೆ ಅಬ್ಬಾಯಿನಾಯ್ಡು ಸ್ಟುಡಿಯೊದಲ್ಲಿ ಭರ್ಜರಿ ಸೆಟ್ ಹಾಕಿಸಿ ಚಿತ್ರೀಕರಣವನ್ನು ಅದ್ದೂರಿಯಾಗಿ ಆರಂಭಿಸಿದ್ದಾರೆ.

ಉಪೇಂದ್ರ 'ಗಾಡ್‌ಫಾದರ್'ನಲ್ಲಿ ಮೂರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಮೊದಲು ದ್ವಿಪಾತ್ರದಲ್ಲಿ ನಟಿಸಿರುವ ಅನುಭವ ಇರುವ ಅವರೀಗ ನಟನೆಯಲ್ಲಿ ಮತ್ತೊಂದು ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಳ್ಳುತ್ತಿದ್ದಾರೆ. ಪಾತ್ರಗಳು ಹೆಚ್ಚಿದಷ್ಟೂ ವೇಷಭೂಷಣ ಹೆಚ್ಚು. ಹಾಗಾಗಿ 'ಗಾಡ್‌ಫಾದರ್' ದೆಸೆಯಿಂದ 'ಉಪ್ಪಿಗಿಂತ ರುಚಿ ಬೇರೆಯಿಲ್ಲ' ಎಂದು ರಿಯಲ್‌ಸ್ಟಾರ್ ಅಭಿಮಾನಿಗಳು ಮತ್ತೊಮ್ಮೆ ಹಾಡಬಹುದು.